International Journal of Applied Research 2022; 8(2): 564-568




**ISSN Print:** 2394-7500
**ISSN Online:** 2394-5869
**Impact Factor:** 8.4
IJAR 2022; 8(2): 564-568
www.allresearchjournal.com
Received: 12-12-2021
Accepted: 17-01-2022

**ಮಾನಸ ಎಸ್.ಕೆ.**
ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ, ಸಮಾಜ ವಿಜ್ಞಾನ ನಿಘಂಟು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ, ಭಾರತ

**ಡಾ.ಕೆ.ಎಂ.ಮೇತ್ರಿ**
ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಸಮಾಜ ವಿಜ್ಞಾನ ನಿಘಂಟು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ, ಭಾರತ

**Corresponding Author:**
**ಮಾನಸ ಎಸ್.ಕೆ.**
ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ, ಸಮಾಜ ವಿಜ್ಞಾನ ನಿಘಂಟು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ, ಭಾರತ

# ಕರ್ನಾಟಕದಲ್ಲಿ ತಗರು ಜೋಗಿ ಸಮುದಾಯ ಪಾರಂಪರಿಕ ನಿಲುವುಗಳು ಮತ್ತು ಸಂಪ್ರದಾಯ

**ಮಾನಸ ಎಸ್.ಕೆ., ಡಾ.ಕೆ.ಎಂ.ಮೇತ್ರಿ**

## ೧. ಪ್ರಸ್ತಾವನೆ

ಮಾನವನ ಉಗಮದ ಹಂತವನ್ನು ಹೇಗೆ ಅಲೆಮಾರಿ ಜೀವನವೆಂಬುದಾಗಿ ಕಾಣುತ್ತೇವೆಯೋ ಅದೇ ರೀತಿ ಬುಡಕಟ್ಟು ಸಮುದಾಯದವರ ಜೀವನವು ಸಾಗಿ ಬಂದಿದೆ. ಡಾರ್ವಿನ್‌ನ ವಿಕಾಸವಾದದ ಸಿದ್ಧಾಂತದಲ್ಲಿ ತಿಳಿಸಿರುವಂತೆ ಮಾನವನ ವಿಕಾಸವು ಬೆಳೆದು ಬಂದಿರುವ ರೀತಿಯಲ್ಲಿ ಆದಿವಾಸಿ ಸಮುದಾಯಗಳು ಬೆಳೆದು ಬಂದಿವೆ. ಅನಾಗರೀಕತೆಯಿಂದ ನಾಗರೀಕತೆಯೆಡೆಗೆ ಮಾನವನ ವಿಕಾಸ ಬೆಳೆದು ಬಂದಿದೆ. ಈ ಹಂತದಲ್ಲಿ ಹಲವಾರು ಹಂತಗಳನ್ನು ದಾಟಿಕೊಂಡು ಇಂದು ನಾಗರೀಕತೆಯ ಬದುಕನ್ನು ಸಾಗಿಸುತ್ತಿದ್ದಾನೆ. ಭಾರತೀಯ ಸಮಾಜದಲ್ಲಿ ಅನೇಕ ರೀತಿಯ ಧರ್ಮ, ಜಾತಿ ವರ್ಗಗಳಿಂದ ಕೂಡಿದ ಸಮುದಾಯಗಳಿದ್ದು ಇಲ್ಲಿ ಪ್ರತಿಯೊಂದು ಧರ್ಮ, ಜಾತಿ ತಮ್ಮದೇ ಆದ ನೀತಿ–ನಿಯಮಗಳು, ಆಚರಣೆಗಳು, ಸಂಪ್ರದಾಯಗಳು, ಸಂಸ್ಕೃತಿ, ಉಡುಗೆ, ತೊಡುಗೆಗಳು, ನಂಬಿಕೆಗಳನ್ನು ಒಳಗೊಂಡಿವೆ. ಭಾರತದಲ್ಲಿ ವರ್ಗಗಳು ಮತ್ತು ವೃತ್ತಿಯ ಆಧಾರದ ಮೇಲೆ ಹುಟ್ಟಿಕೊಂಡಿರುವ ಜಾತಿ ವ್ಯವಸ್ಥೆಯಲ್ಲಿ ಅನೇಕ ಜಾತಿ–ಉಪಜಾತಿಗಳಿವೆ. ಪ್ರತಿಯೊಂದು ಜಾತಿಯು ತನ್ನದೇ ಆದ ಸಾಂಸ್ಕೃತಿಕ ವ್ಯತ್ಯಾಸವನ್ನು ಹೊಂದಿದ್ದು ಜಾತಿ ಆಧಾರಿತ ಮೂಲ ಕಸುಬುಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಇಂತಹ ಜಾತಿ ವ್ಯವಸ್ಥೆಯಲ್ಲಿ ಕುರುಬ ಜಾತಿಯು ಒಂದು.

ಕುರುಬರು ನಮ್ಮ ಭಾರತದ ಎಲ್ಲಾ ಪ್ರದೇಶಗಳಲ್ಲಿ ಹಂಚಿಕೆಯಾಗಿದ್ದಾರೆ. ಒಂದೊಂದು ರಾಜ್ಯಗಳಲ್ಲಿ ಒಂದೊಂದು ರೀತಿಯ ಹೆಸರಿನಿಂದ ಗುರುತಿಸಿಕೊಂಡಿದೆ. ಕುರುಬ ಸಮುದಾಯಕ್ಕೆ ಭಾರತದಲ್ಲಿ ಸಾವಿರಾರು ವರ್ಷಗಳ ಇತಿಹಾಸವಿದೆ. ಇವರಲ್ಲಿ ಅನೇಕ ಕುಲಜಾತಿಗಳಿರುವಂತೆ ಉಪಪಂಗಡಗಳೂ ಇವೆ. ಮತ್ತು ಅವರದೇ ಆದ ಸಂಸ್ಕೃತಿ ಇದೆ. ಭಾರತದ ಸಂಸ್ಕೃತಿಯನ್ನು ತಿಳಿಯಬೇಕಾದರೆ ಎಲ್ಲಾ ಸಾಂಸ್ಕೃತಿಕ ಜನಾಂಗಗಳ ಇತಿಹಾಸವನ್ನು ತಿಳಿಯಬೇಕಾಗುತ್ತದೆ. ಹಾಗೆಯೇ ಆ ಜನಾಂಗದ ಸಾಂಸ್ಕೃತಿಕ ಹತ್ತು ಹಲವು ದಿಕ್ಕುಗಳ ಸಂಗಮದಿಂದ ಇತಿಹಾಸವನ್ನು ಶೋಧಿಸಿದಾಗ ಮಾತ್ರ ಕುರುಬ ಸಮುದಾಯ ಮತ್ತು ಅವುಗಳ ಪಂಗಡಗಳ ಚರಿತ್ರೆಯನ್ನು ತಿಳಿಯಲು ಸಾಧ್ಯ.

ಪ್ರಾಚೀನ ಕಾಲದಿಂದಲೂ ಪಶುಪಾಲನೆ, ಕುರಿಸಾಕಾಣಿಕೆ, ಕಂಬಳಿ ತಯಾರಿಕೆ ಹಾಗೂ ಕೃಷಿಯನ್ನು ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡು ಬಂದ ಈ ಕುರುಬ ಸಮುದಾಯದವರು ತಮ್ಮ ಸಂಸ್ಕೃತಿಯ ಮೂಲ ಸೊಗಡನ್ನು ಪರಂಪರಾಗತ ಜೀವನ ಪದ್ಧತಿಯನ್ನು ಯಥಾವತ್ತಾಗಿ ಉಳಿಸಿಕೊಂಡು ಬಂದ ಜನ ಸಮುದಾಯಗಳಲ್ಲಿ ಪ್ರಮುಖರೆನಿಸುತ್ತಾರೆ. ಇಡೀ ಭಾರತದಾದ್ಯಂತ ಹರಡಿರುವ ಈ ಸಮುದಾಯ ದೇಶದ ಚರಿತ್ರೆಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ.

ಕುರುಬ ಸಮುದಾಯದ ಕುರಿತು ಚಾರಿತ್ರಿಕವಾಗಿ ಕಟ್ಟಿಕೊಡುವ ಎರಡು ಸಾಹಿತ್ಯಗಳೆಂದರೆ, ಸಿದ್ದಮಂಕ ಚರಿತ್ರೆ ಹಾಗೂ ತಗರ ಪವಾಡ ಇವು ಚರಿತ್ರೆಯ ಪುರಾಣೀಕರಣ ವರ್ಗಕ್ಕೆ ಸೇರಿದವುಗಳಾಗಿದ್ದು, ಕುರುಬ ಸಮುದಾಯದ ಎರಡು ಸಂಪ್ರದಾಯಗಳನ್ನು ಸಾಹಿತ್ಯಾತ್ಮಕವಾಗಿ ಕಟ್ಟಿಕೊಡುತ್ತವೆ. ಸತ್ತ ಕುರಿಯನ್ನು ಕಲ್ಯಾಣದೊಳಗೆ ತಂದ ತಪ್ಪಿಗಾಗಿ ಕಲ್ಯಾಣದಿಂದ ಹೊರಹಾಕಿಸಿಕೊಂಡ ಕುರುಬರು ೧೨ ವರ್ಷಗಳ ಬಳಿಕ ಸಿದ್ದಮಂಕನ ಕೃಪೆಯಿಂದ ಕಲ್ಯಾಣವನ್ನು ಪ್ರವೇಶಿಸಿದ ಕಥಾವಸ್ತುವಾಗಿದೆ. ತಗರ ಪವಾಡವು ಸತ್ತ ಕುರಿಯನ್ನು ಕಲ್ಯಾಣದೊಳಗೆ ತಂದ ತಪ್ಪಿಗೆ ಕಲ್ಯಾಣದಿಂದ ಹೊರಹಾಕಿಸಿಕೊಂಡ ಕುರುಬರನ್ನು ಶಾಂತಿಮುತ್ತಯ್ಯನ ಕೃಪೆಯಿಂದ ಕಲ್ಯಾಣ ಪ್ರವೇಶಿಸಿದ ಕಥಾವಸ್ತುವನ್ನು ಹೊಂದಿದೆ.

ಮಾಳಿಂಗರಾಯ ಕಾವ್ಯ, ಗೊಲ್ಲಾಳಯ್ಯನ ಪುರಾಣ ಹಾಗೂ ಮಾಳಲಿಂಗರಾಯನ ಪುರಾಣ, ಹಾಲುಮತ ಪುರಾಣಗಳು
ಮೈಲಾರಲಿಂಗನ ಕಾವ್ಯ, ಕುರುಬ ಸಮುದಾಯದ ಪ್ರಮುಖ

ಕೃತಿಗಳು. ಇನ್ನು ಮುಂತಾದ ಉಪಜಾತಿಗಳಿವೆ ಪ್ರತಿಯೊಂದು ಉಪಜಾತಿಯಲ್ಲೂ ಕೆಲವು ಪಂಗಡಗಳಿವೆ.
ಈ ನಿಟ್ಟಿನಲ್ಲಿ ಅವರು ಕಟ್ಟಿಕೊಡುವ ಪುರಾಣಗಳ ಆಶಯದ ಹಿಂದೆ ಸಮುದಾಯಗಳ ಪಾರಂಪಾರಿಕ ತಿಳುವಳಿಕೆಯನ್ನು ಜಗತ್ತು ವಶಪಡಿಸಿಕೊಳ್ಳುವ ಹುನ್ನಾರ ನಡೆಸಿದೆ.

**೧.೨ ಸಾಹಿತ್ಯ ಪರಾಮರ್ಶನ**

ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕೆಲವೊಂದು ಪುಸ್ತಕ ಮತ್ತು ಲೇಖನಗಳನ್ನು ಅವಲೋಕನ ಮಾಡಿ ಅವುಗಳ ಸಾರಾಂಶವನ್ನು ಪಡೆದುಕೊಳ್ಳಲಾಗಿದೆ.

**ವೀರಭದ್ರ ನಾಯ್ಕ ಪಿ, ೨೦೧೦, *ಶಿಕ್ಷಣವಂಚಿತ ಬುಡಕಟ್ಟು ಮಕ್ಕಳು*, ಕನ್ನಡ ವಿಶ್ವ ವಿದ್ಯಾನಿಲಯ, ಹಂಪಿ.**

ಯಾವುದೇ ಒಂದು ರಾಷ್ಟ್ರದ ಆದರ್ಶ ಕಲ್ಪನೆಗಳು, ಸಾಂಸ್ಕೃತಿಕ ಮೌಲ್ಯಗಳು ಆರ್ಥಿಕ ಹಾಗೂ ಸಾಮಾಜಿಕ ಬಲವು ಶಿಕ್ಷಣದ ಮೇಲೆ ಅವಲಂಬಿತವಾಗಿದೆ. ಬುಡಕಟ್ಟು ಸಮುದಾಯಗಳು ಆರ್ಥಿಕವಾಗಿ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣ ಬಹಳ ಮುಖ್ಯ. ಶಿಕ್ಷಣದಿಂದ ವ್ಯಕ್ತಿಯಲ್ಲಿ ಆತ್ಮವಿಶ್ವಾಸ ಹೆಚ್ಚುವುದಲ್ಲದೆ, ವ್ಯಕ್ತಿಯ ಸಾಮಾಜಿಕ ಪ್ರಗತಿಯೂ ಆಗುತ್ತದೆ. ಆದ್ದರಿಂದ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಶಿಕ್ಷಣ ಬಹುಮುಖ್ಯ ಈ ದಿಶೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಬುಡಕಟ್ಟು ಸಮುದಾಯಗಳ ಶಿಕ್ಷಣದ ಅವಶ್ಯಕತೆಯನ್ನು ಮನಗಂಡು ವಿವಿಧ ಬುಡಕಟ್ಟು ಪ್ರದೇಶಗಳಲ್ಲಿ ಆಶ್ರಮ ಶಾಲೆಗಳನ್ನು ಆರಂಭಿಸಿವೆ. ಆದರೆ ಬುಡಕಟ್ಟು ಸಮುದಾಯಗಳು ಶಿಕ್ಷಣವನ್ನು ಸಾಮಾನ್ಯ ಶಿಕ್ಷಣದ ಜೊತೆ ಹೋಲಿಸಿದಾಗ ಹೇಳಿಕೊಳ್ಳವಂತಹ ಬದಲಾವಣೆಗಳೇನೂ ಆಗಿಲ್ಲ. ಇವತ್ತಿಗೂ ದೇಶದಲ್ಲಿ ೮೧ ಲಕ್ಷ ಬುಡಕಟ್ಟು ಮಕ್ಕಳು ಶಾಲೆಯಿಂದ ಹೊರಗುಳಿದ್ದಾರೆ. ಇದೆನ್ನೆಲ್ಲಾ ಗಮನಿಸಿದ ಸರ್ಕಾರವು ಗಿರಿಜನ ಮಕ್ಕಳ ಶಿಕ್ಷಣಕ್ಕಾಗಿ ಅವರು ವಾಸಿಸುವ ಪ್ರದೇಶಗಳಲ್ಲಿಯೇ ಆಶ್ರಮ ಶಾಲೆಗಳನ್ನು ಆರಂಭಿಸಲಾಗಿದ್ದು, ಮಕ್ಕಳಿಗೆ ವಸತಿ, ಉಚಿತ ಊಟ, ಬಟ್ಟೆ, ಪಠ್ಯಪುಸ್ತಕ, ಲೇಖನ ಸಾಮಗ್ರಿಗಳು ಹಾಗೂ ವಿದ್ಯಾರ್ಥಿ ವೇತನ ಇವೆ ಮುಂತಾದ ಪ್ರೋತ್ಸಾಹದಾಯಕ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಆದರೂ ಮಕ್ಕಳ ಗೈರು ಹಾಜರಿ ಹಾಗೂ ಶಾಲೆ ಬಿಡುವ ಪ್ರಮಾಣ ಕಡಿಮೆಯಾಗಿಲ್ಲ ಕಾರಣ ಬಡತನ, ಆರ್ಥಿಕ ಹಿಂದುಳಿಯುರಿವಿಕೆ, ಕಡಿಮೆ ಸಂಪಾದನೆ, ಅರಣ್ಯ ಉತ್ಪನ್ನಗಳ ಮೇಲಿನ ಅವಲಂಬನೆ, ಋತುಮಾನದ ವಲಸೆ, ದೌರ್ಜನ್ಯಗಳು ಇನ್ನು ಮುಂತಾದ ಅಂಶಗಳಿಂದ ಶಾಲೆ ಬಿಡಲು ಪ್ರಮುಖ ಕಾರಣಗಳಾಗಿವೆ. ಬುಡಕಟ್ಟು ಸಮುದಾಯಗಳ ಸಾಕ್ಷರತೆಯನ್ನು ವಿಶ್ಲೇಷಿಸಿದ್ದಾರೆ. ಚಾಮರಾಜನಗರ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ಕೈಗೊಂಡಿದ್ದಾರೆ. ಒಟ್ಟಾರೆಯಾಗಿ ಬುಡಕಟ್ಟು ಸಮುದಾಯಗಳನ್ನು ಮುಖ್ಯ ವಾಹಿನಿಗೆ ತರಲು ಶಿಕ್ಷಣದ ಪಾತ್ರ ಎಷ್ಟು ಮುಖ್ಯ, ಮಕ್ಕಳ ಶಾಲೆಯಿಂದ ಹೊರಗುಳಿದಂತೆ ಪೋಷಕರು ಮಾಡುವಂತಹ ಕೆಲಸ, ಸರ್ಕಾರ ಕೈಗೊಳ್ಳುವಂತಹ ಕ್ರಮಗಳು, ಪೋಷಕರಿಗೆ ಅರಿವು ಮೂಡಿಸುವುದು, ಶಿಕ್ಷಕರ ಮನೋಧೋರಣೆಯಲ್ಲಿ ಬದಲಾವಣೆ, ಇಂತಹ ವಿಚಾರಗಳನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ, ಇದು ಸಂಶೋಧನೆಗೆ ಹಾಗೂ ಸಮುದಾಯದ ಅಧ್ಯಯನಕ್ಕೆ ಸೂಕ್ತವಾಗಿದೆ

**ಗುರುಲಿಂಗಯ್ಯ ಎಂ, ೨೦೦೫ *'ಬುಡಕಟ್ಟು ಮತ್ತು ಅಭಿವೃದ್ಧಿ'* ಮಂಗಳೂರು ವಿಶ್ವವಿದ್ಯಾನಿಲಯ,ಮಂಗಳ ಗಂಗೋತ್ರಿ, ದಕ್ಷಿಣ ಕನ್ನಡ.**

ಎಂಬ ಕೃತಿಯು ಸಮಾಜಶಾಸ್ತ್ರೀಯ ನೆಲಗಟ್ಟಿನಲ್ಲಿ ಮಾಡಲಾಗಿರುವ ಸಂಶೋಧನಾ ಅಧ್ಯಯನವಾಗಿದೆ. ಇದರಲ್ಲಿ ಕರ್ನಾಟಕದ ಬುಡಕಟ್ಟುಗಳಲ್ಲಿ ಒಂದಾಗಿರುವ ಕಾಡುಗೊಲ್ಲ ಸಮುದಾಯವನ್ನು ಸಂಶೋಧನಾ ಅಧ್ಯಯನಕ್ಕೆ ಒಳಪಡಿಸಿ ಜನಾಂಗದ ವಲಸೆ, ಐತಿಹಾಸಿಕ ಹಿನ್ನೆಲೆ, ಸಾಮಾಜಿಕ ಸಂಘಟನೆ, ಶಿಕ್ಷಣ, ಸಾಂಪ್ರದಾಯಿಕ ವೃತ್ತಿ, ಹೋರಾಟಗಳು, ದೇವರು, ಧರ್ಮ, ಸಾಹಿತ್ಯ, ಕಲೆ, ರಾಜಕೀಯ, ಹಿಂದುಳಿದಿರುವಿಕೆಗೆ ಕಾರಣಗಳು ಹೀಗೆ ವಿವಿಧ ಅಂಶಗಳನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಬುಡಕಟ್ಟು ಹಾಗೂ ಹಿಂದುಳಿದ ಸಮುದಾಯಗಳನ್ನು ಕುರಿತಂತೆ ಅಧ್ಯಯನ ಮಾಡುವುದಕ್ಕೆ ಅಗತ್ಯವಾಗಿದೆ,

**Bisht V K Pant, 1999** '*Backward Communities Identity*, Development and Transformation.

ಈ ಕೃತಿಯಲ್ಲಿ ಬುಡಕಟ್ಟು ಅನನ್ಯತೆ, ಅಭಿವೃದ್ಧಿ ಮತ್ತು ಪರಿವರ್ತನೆಗೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಈ ಗ್ರಂಥದಲ್ಲಿ ನೋಡಬಹುದಾಗಿದೆ. ಅಲ್ಲದೆ ಬುಡಕಟ್ಟುಗಳಿಗೆ ಜಾಗತೀಕಣ ಪ್ರಭಾವ, ಬುಡಕಟ್ಟು ಅಭಿವೃದ್ಧಿಯ ತೊಡಕುಗಳು, ಹೀಗೆ ಅನೇಕ ಅಂಶಗಳನ್ನಿಟ್ಟುಕೊಂಡು ಬೇರೆ ಬೇರೆ ರಾಜ್ಯಗಳ ಬುಡಕಟ್ಟು ಸ್ಥಿತಿಗತಿಗಳ ಜೊತೆಗೆ ಕರ್ನಾಟಕದ ಬುಡಕಟ್ಟು ವಾಸ್ತವಿಕ ಸ್ಥಿತಿ ಹಾಗೂ ಪರಿವರ್ತನೆಯ ತಲ್ಲಣಗಳನ್ನು ಈ ಕೃತಿಯಲ್ಲಿ ಚರ್ಚಿಸಿದ್ದಾರೆ ಆದ್ದರಿಂದ ಈ ಅಧ್ಯಯನಕ್ಕೆ ಸೂಕ್ತವಾದ ಗ್ರಂಥವಾಗಿದೆ.

**ಹಿರಿಯಣ್ಣ ಅಂಬಳಿಕೆ, ೧೯೯೫ *'ಬುಡಕಟ್ಟು ಸಮಾಜಗಳಲ್ಲಿ ಜನಪದದ ಪಾತ್ರ'* ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.**

ಈ ಗ್ರಂಥದಲ್ಲಿ ಬುಡಕಟ್ಟು ಜನಾಂಗದವರಲ್ಲಿನ ಜನಪದ ವಿಷಯಗಳಾದ, ಕಲೆ, ಸಾಹಿತ್ಯ, ಆಚಾರ, ವಿಚಾರಗಳು, ರೂಢಿ ಸಂಪ್ರದಾಯಗಳು ತಮ್ಮದೇ ಆದ ವಿಶಿಷ್ಟತೆಗಳೊಂದಿಗೆ ಬುಡಕಟ್ಟು ಸಮಾಜದಲ್ಲಿ ಹೇಗೆ ಕಾರ್ಯಾಚರಣೆಯಲ್ಲಿವೆ. ಮತ್ತು ಬುಡಕಟ್ಟು ಸಮಾಜಗಳಲ್ಲಿ ಅನುಸರಿಸುವ ನಾಟಿ ವೈದ್ಯ ಪದ್ದತಿಯಲ್ಲಿ ಪ್ರಕೃತಿದತ್ತವಾಗಿ ಸಿಗುವಂತಹ ಪದಾರ್ಥಗಳ ಉಪಯೋಗದಿಂದ ಮಾಡುವ ಔಷಧ ಪದ್ಧತಿ, ಬಳಕೆಯ ವಸ್ತುಗಳು, ವಿಧಾನ ಕ್ರಮ, ಆಹಾರ ಪದ್ಧತಿ, ಇತ್ಯಾದಿ ಹಲವಾರು ಅಂಶಗಳನ್ನು ಕುರಿತು ವಿಶ್ಲೇಷಣೆ ಮಾಡುತ್ತಾರೆ. ಯಾವುದೇ ಒಂದು ವಿಷಯ ಉಗಮಗೊಂಡು ಯಶಸ್ವಿಯನ್ನು ಕಾಣಬೇಕಾದರೆ ಬುಡಕಟ್ಟುಗಳಲ್ಲಿ ಅನುಸರಿಸಿಕೊಂಡು ಬರುತ್ತಿರುವ ಜನಪದ ಕಲೆಯೇ ಮೂಲ. ಎನ್ನುವ ಪ್ರಮುಖ ಅಂಶವನ್ನು ತಮ್ಮ ಅಧ್ಯಯನದಲ್ಲಿ ಸಂಕ್ಷಿಪ್ತವಾಗಿ ವಿಶೇಷಣೆ ಮಾಡಿದ್ದಾರೆ.

**ಸಣ್ಣರಾಮ, ೧೯೯೫ *'ಬುಡಕಟ್ಟು ಸಂಸ್ಕೃತಿ'* ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟ. ೨೦೦೧**

ಪ್ರಸ್ತುತ ಕೃತಿಯಲ್ಲಿ ವೈವಿಧ್ಯಮಯವಾದ ಬುಡಕಟ್ಟು ಸಂಸ್ಕೃತಿಯನ್ನು ಮತ್ತು ಆ ಸಮುದಾಯಗಳ ಅನನ್ಯತೆಯನ್ನು ಜಾಗತೀಕರಣ ಸಂದರ್ಭದಲ್ಲಿ ಹೇಗೆ ಕಾಪಾಡಿಕೊಳ್ಳಬೇಕು ಎಂಬ ಅಂಶವನ್ನು ತಿಳಿಸಿದ್ದಾರೆ. ತಮ್ಮದೇ ಆದ ಪ್ರಾದೇಶಿಕತೆಗೆ ಅನುಗುಣವಾಗಿ ವಿಶೇಷವಾದ ಬದುಕನ್ನು ಸಾಗಿಸುತ್ತಿರುವ ಮತ್ತು ಸಮಾಜದ ಮುಖ್ಯವಾಹಿನಿಯ ಸಹವಾಸಕ್ಕೆ ಹೋಗದ

ಬುಡಕಟ್ಟುಗಳ ಅಭಿವೃದ್ಧಿ ಪಡಿಸಬೇಕಾದರೆ, ಅವರನ್ನು ಆಧುನಿಕ ಸಂಸ್ಕೃತಿಗೆ ಹೊಂದಿಕೊಳ್ಳುವಂತೆ ಪ್ರೇಪಿಸಬೇಕಾದರೆ ಅವರ ವಿಶಿಷ್ಠತೆಗಳನ್ನು ಅರ್ಥೈಸಿಕೊಳ್ಳದೆ ಅಸಾಧ್ಯ. ಅಲ್ಲದೆ ಆಧುನಿಕತೆಯ ಪ್ರಭಾವದಿಂದ ಉಂಟಾಗಿರುವ ಸಂಸ್ಕೃತಿಕ ಆಘಾತವನ್ನು ತೊಡೆದು ಹಾಕುವಂತಹ ಪ್ರಯತ್ನಗಳನ್ನು ನಡೆಸಬೇಕಾಗಿರುವುದು ಅನಿವಾರ್ಯವಾಗಿದೆ. ಸಮಾಜದ ಅಂಚಿನಲ್ಲಿ ತಮ್ಮ ಸಾಂಸ್ಕೃತಿಕ ಅನನ್ಯತೆಯ ಸಲುವಾಗಿ ಹೋರಾಟ ಮಾಡುತ್ತಿರುವ ಬುಡಕಟ್ಟುಗಳಿಗೆ ಅನಿವಾರ್ಯವಾಗಿರುವಂತಹ ಸೌಲಭ್ಯಗಳ ಕುರಿತು ಅರಿವನ್ನು ಕಲ್ಪಿಸುವಂತಹ ಕೆಲಸವನ್ನು ಸರ್ಕಾರ ಮತ್ತು ಶಿಕ್ಷಿತ ಸಮುದಾಗಳು ಮಾಡಬೇಕು ಎನ್ನುವಂತಹ ಬುಡಕಟ್ಟು ಸಮಾಜದ ಏಳಿಗೆಯ ಸಲುವಾಗಿ ಬೇಕಾದಂತಹ ಅಂಶಗಳನ್ನು ಲೇಖಕರು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ.

Ramachandran, S, 2012. *Tribal Programmers in India*. Abhijeet Publication, New Delhi.

ಪ್ರಸ್ತುತ ಈ ಗ್ರಂಥದಲ್ಲಿ ಬುಡಕಟ್ಟು ಸಮುದಾಯದ ಅಭಿವೃದ್ಧಿ ತಂತ್ರಗಳು ಮತ್ತು ಅಭಿವೃದ್ಧಿಯ ಯೋಜನೆಗಳ ಅಂಶಗಳು, ಬುಡಕಟ್ಟು ಸಮುದಾಯ ಬದುಕುವ ಜೀವನ ಶೈಲಿ, ಈ ಸಮುದಾಯಗಳ ಬೆಳೆವಣಿಗೆಯ ವಿಕಾಸದ ಹಂತಗಳನ್ನು ಉಲ್ಲೇಖಿಸಿದ್ದಾರೆ.

**ಕಚಿಟಿಣ ಗಿ ಏ ಘುಣ, ೧೯೯೯ :ಚಿಛಿಇತಿಚಿಡಿಜ ಅಂಟಟಣಾಟಿಣುಘ ಖಜಜಟಿಣುಣಧಿ, ಆಜತಜಟಂಠಿಟಜಟಿಣ ಚಿಟಿಜ ಖಿಡಿಚಿಛಿಜಿಂಡಿಟಚಿಣುಂಟಿ ಉಧಿಚಿಟಿ ಕಣಾಛಟ್ಘುಟಿಂ ಊಂಣಾಜ, ಓಜತಿ ಆಜಟ್ಘು.**

ಈ ಕೃತಿಯಲ್ಲಿ ಬುಡಕಟ್ಟು ಅನನ್ಯತೆ, ಅಭಿವೃದ್ಧಿ ಮತ್ತು ಪರಿವರ್ತನೆಗೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಈ ಗ್ರಂಥದಲ್ಲಿ ನೋಡಬಹುದಾಗಿದೆ. ಅಲ್ಲದೆ ಬುಡಕಟ್ಟುಗಳಿಗೆ ಜಾಗತೀಕಣ ಪ್ರಭಾವ, ಬುಡಕಟ್ಟು ಅಭಿವೃದ್ಧಿಯ ತೊಡಕುಗಳು, ಹೀಗೆ ಅನೇಕ ಅಂಶಗಳನ್ನಿಟ್ಟುಕೊಂಡು ಬೇರೆ ಬೇರೆ ರಾಜ್ಯಗಳ ಬುಡಕಟ್ಟು ಸ್ಥಿತಿಗತಿಗಳ ಜೊತೆಗೆ ಕರ್ನಾಟಕದ ಬುಡಕಟ್ಟು ವಾಸ್ತವಿಕ ಸ್ಥಿತಿ ಹಾಗೂ ಪರಿವರ್ತನೆಯ ತಲ್ಲಣಗಳನ್ನು ಈ ಕೃತಿಯಲ್ಲಿ ಚರ್ಚಿಸಿದ್ದಾರೆ ಆದ್ದರಿಂದ ಈ ಅಧ್ಯಯನಕ್ಕೆ ಸೂಕ್ತವಾದ ಗ್ರಂಥವಾಗಿದೆ.

**ಕಲಬುರ್ಗಿ.ಎಂ.ಎಂ, ಪರಶುರಾಮಯ್ಯ.ಸಿ.ಕೆ ಮತ್ತು ಹಳ್ಳಿಕೇರಿ. ಎಫ್.ಟಿ.** ಅವರ ತಗರ ಪವಾಡ ಕೃತಿಯಲ್ಲಿ ಒಟ್ಟು ಎಂಟು ಸಂಧಿಗಳಿವೆ. ಪ್ರತಿಯೊಂದು ಸಂಧಿಯಲ್ಲೂ ಒಬ್ಬ ಶರಣರು ಹುಟ್ಟಿ ಕೊಂಡಿದ್ದಾರೆ. ಈ ಕಥೆಯು ೧೨ ನೇ ಶತಮಾನದ ಕಾಲದಲ್ಲಿ ಉಲ್ಲೇಖವಾಗಿದೆ. ಅಂದರೆ ಕಲ್ಯಾಣ ಪಟ್ಟಣದ ರಾಜ ಬಿಜ್ಜಳ ಮತ್ತು ಮಂತ್ರಿ ಬಸವಣ್ಣನವರ ಕಾಲಘಟ್ಟದಲ್ಲಿ ತಗರ ಪವಾಡ ನಡೆದ ಘಟನೆಯನ್ನು ಉಲ್ಲೇಖಿಸಲಾಗಿದೆ. ಸತ್ತ ತಗರಿಗೆ ಜೀವ ತುಂಬಿ ಪವಾಡವನ್ನು ಮಾಡಿದೆ. ಶಾಂತಯ್ಯ ಹಾಲು ಮತಕ್ಕೆ ಸೇರಿದ್ದು.ಇವರು ಕುರುಬ ಕುಲದ ದೈವರಾಗಿದ್ದಾರೆ. ಈ ಕೃತಿಯು ನನ್ನ ಸಂಶೋಧನೆಗೆ ಅಗತ್ಯ ಮಾಹಿತಿಯನ್ನು ತಂದು ಕೊಡುತ್ತದೆ.

**ಸೊಬಟಿ ಚಂದ್ರಪ್ಪ** ಹಾಲುಮತ ಸಾಂಸ್ಕೃತಿಕ ಕಥನ ಎಂಬ ಕೃತಿಯಲ್ಲಿ ತಗರು ಜೋಗಿಯ ಬಗ್ಗೆ ಸವಿಸ್ತಾರವಾದ ಮಾಹಿತಿಗಳು ಲಭ್ಯವಾಗುತ್ತದೆ.ಅವರು ಕುಲ, ಜಾತಿ, ಜನಾಂಗ, ಸಮುದಾಯ ಹಾಗೂ ಪ್ರಾದೇಶಿಕತೆಯ ಬಗ್ಗೆ ಸವಿಸ್ತಾರವಾದ ಮಾಹಿತಿ ಲಭ್ಯವಾಗುತ್ತದೆ.

**ಮೇತ್ರಿ.ಕೆ.ಎಂ,** ಹಾಲುಮತ ಬುಡಕಟ್ಟುಗಳು ಎಂಬ ಕೃತಿಯಲ್ಲಿ ರೇವಣ್ಣನ ಟಗರು ಪವಾಡ, ಕಂಬಳಿ ಮಠ ಮತ್ತು ಗೊಂಡರು ಎಂಬ ಲೇಖನದಲ್ಲಿ ನವಕೋಟಿ ಕುರಿಯ ಹುಟ್ಟು, ರೇವಣ ಸಿದ್ಧರ ಮಹಾತ್ಮೆ ಹಾಗೂ ಶಾಂತಯ್ಯನ ಟಗರ ಪವಾಡದ ಬಗ್ಗೆ ಉಲ್ಲೇಖಿಸಲಾಗಿದೆ.

**೧.೩ ಅಧ್ಯಯನದ ಸಮಸ್ಯೆಯ ಹೇಳಿಕೆ :**

ಪ್ರಸ್ತುತ ಸಂಶೋಧನೆಯ "ಟಗರು ಜೋಗಿ ಸಮುದಾಯದ ಸಾಮಾಜಿಕ ಅಧ್ಯಯನಕ್ಕೆ ಸಂಬಂಧಿಸಿದ್ದು ಟಗರು ಜೋಗಿಗಳು ವಿಶಿಷ್ಟವಾದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ್ದಾರೆ. ಇಲ್ಲಿಯ ತನಕ ಈ ವಿಷಯದ ಕುರಿತು ಯಾವುದೇ ಅಧ್ಯಯನಗಳು ನಡೆದಿರುವುದಿಲ್ಲ. ಈ ಸಮುದಾಯಿದ ಪರಿಚಯ ಅವರ ಸಾಂಸ್ಕೃತಿಕ ಪರಂಪರೆ ಮತ್ತು ಅವರು ಮಾಡುವ ವೃತ್ತಿ ಕಸುಬು ಮತ್ತು ಅವರ ಬದಕನು ಸಮುದಾಯವನ್ನು ಅಧ್ಯಯನ ಮಾಡುವುದು ನನ್ನ ಸಂಶೋಧನೆಯ ವಿಷಯವಾಗಿದೆ.

**೧ ಅಧ್ಯಯನದ ಪ್ರಾಮುಖ್ಯತೆ**

೧. ಭಾರತದ ಅಸಂಖ್ಯಾತ ಅಲೆಮಾರಿ ಬುಡಟ್ಟುಗಳ ಸ್ಥಿತಿಗಳಿಗಿಂತ ತಗರು ಜೋಗಿ ಭಿನ್ನವಾಗಿಲ್ಲ. ಅವರು ವೈವಧ್ಯಮಯವಾದ ಸಾಮಾಜಿಕ ಸಾಂಸ್ಕೃತಿಕ ಅಂಶಗಳನ್ನು ಹೊಂದಿದ್ದಾರೆ. ಅವರ ಐತಿಹಾಸಿಕವಾದ ಪರಂಪರೆ ಮತ್ತು ಪುರಾಣಗಳಿಂದ ಸಾಕಷ್ಟು ಅಂಶಗಳು ತಿಳಿದುಬಂದಿದೆ. ಆದ್ದರಿಂದ ಈ ಅಧ್ಯಯನದಲ್ಲಿ ಅವರ ಪರಂಪರಾಗತವಾದ ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದರ ಮೂಲಕ ಅವುಗಳಲ್ಲಿ ಉಂಟಾದ ಬದಲಾವಣೆಯನ್ನು ಗುರುತಿಸುವ ಮತ್ತು ಅದರ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸಿ ಕೊಡುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗುವುದು.

೨. ತಗರು ಜೋಗಿಗಳು ತಮ್ಮನ್ನು ರಕ್ಷಿಸಿಕೊಳ್ಳಲು ನಡೆಸಿರುವ ಹಲವು ಶತಮಾನಗಳ ಚರಿತ್ರೆಗಳು ಹಾಗೂ ಅಲೆಮಾರಿ ಜೀವನ ಶೈಲಿ, ಶಿಕ್ಷಣದ ಕೊರತೆ, ಸಾಮಾಜಿಕವಾಗಿ ಯಾವುದೇ ಬಲ ಇಲ್ಲದಿರುವುದು, ಬಡತನಗಳೆಂಬ ಹಲವು ಅಡೆತಡೆಗಳನ್ನು ಹೊಂದಿರುವ ತಗರುಜೋಗಿಗಳ ಅಧ್ಯಯನವು ತುಂಬಾ ಮಹತ್ವದಾಗಿದೆ.

೩. ಕೇವಲ ಪರಂಪರೆ ಹಾಗೂ ನಂಬಿಕೆಯನ್ನಾಧರಿಸಿರುವಲೆಮಾರಿ ಸಮುದಾಯಗಳ ಜೀವನ ಕ್ರಮವು ಇಂದು ಕವಲುದಾರಿಗಳಾಗಿಬಂದು ನಿಂತಿದೆ. ಹಾಗೇ ಹಳೆಯ ನಂಬಿಕೆ, ಹಳೆಯ ಆಚರಣೆಗಳನ್ನು ಮುಂದುವರೆಸಿಕೊಂಡು ಹೋಗುವುದರ ಜೊತೆಗೆ ಹೊಸ ಬದುಕಿನ ಸ್ಥಿತ್ಯಂತರ ಬದುಕು ಹಾಗೂ ಈಗಿನ ಪೈಪೋಟಿಯ ಯುಗದಲ್ಲಿ ನೆಲೆಯನ್ನು ಕಂಡು ಕೊಳ್ಳುವುದು ಸಂಶೋಧನೆಯ ಅಗತ್ಯ ಅಂಶವಾಗಿದೆ.

**೧.೫ ಅಧ್ಯಯನದ ಸ್ವರೂಪ**

ಭಾರತದ ಸಾಂಸ್ಕೃತಿಕ ಪರಂಪರೆ ಬಹು ಪ್ರಾಚೀನವಾದದ್ದು, ಪ್ರಭಾವಿಯಾದುದು ಮತ್ತು ಎಲ್ಲದಕ್ಕಿಂತ ಮಿಗಿಲಾಗಿ ಸಂಕೀರ್ಣವಾದುದು ಆಗಿದೆ. ಭಾರತೀಯ ಸಂಸ್ಕೃತಿಯ ಆಳ ಎತ್ತರಗಳನ್ನು ಮತ್ತು ಉದ್ದಗಲವನ್ನು ಪರಿವೀಕ್ಷಿಸುವುದು ಸುಲಭ

ವಿಷಯವಲ್ಲ. ಭಾರತದ ಸಂಸ್ಕೃತಿಯಲ್ಲಿ ಅದರ ಪ್ರಾಚೀನತೆಯೊಂದಿಗೆ ಹಲವಾರು ಸಮೂಹಗಳ ಪಂಥಗಳ, ಪಂಗಡಗಳ ಮತ್ತು ಸಮೂಹಗಳ ಜೀವನ ಕ್ರಮಗಳೊಂದಿಗೆ ಬೆರೆತುಕೊಂಡಿದೆ.

ಯಾವುದೇ ಒಂದು ಬುಡಕಟ್ಟು ಪಂಗಡವನ್ನು ಒಂದು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತಗೊಳಿಸಲು ಸಾಧ್ಯವಿಲ್ಲ ಕಾರಣ ಅವರು ಅಲೆಮಾರಿಗಳಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ,ಸ್ಥಳ ಬದಲಾಯಿಸುವ ಕಾರಣದಿಂದ ಇವರು ಎಲ್ಲ ಪ್ರದೇಶಗಳಲ್ಲಿ ಕಂಡುಬರುತ್ತಾರೆ ಇವರು ಅಲೆಮಾರಿಗಳಾಗಿ ಒಂದು ಕಡೆಯಿಂದ ಮತ್ತೊಂದು ಕಡೆ ಅಲೆಯುವುತ್ತಿರುವುದರಿಂದ ಅವರ ಅನುಭವದ ವ್ಯಾಪ್ತಿ, ಕಲೆ ಮತ್ತು ಅವರ ಪರಂಪರೆಯಿಂದಾಗಿ ಸಮುದಾಯದ ಮೂಲ ಕಸುಬುಗಳನ್ನು ಗುರುತಿಸಬಹುದಾಗಿದೆ.

**೧.೬ ಅಧ್ಯಯನದ ವ್ಯಾಪ್ತಿ**

ಪ್ರಸ್ತುತ ಸಂಶೋಧನಾ ವಿಷಯವಾದ ಟಗರು ಜೋಗಿ ಸಮುದಾಯದ ಸಾಮಾಜಿಕ ಅಧ್ಯಯನವನ್ನು ಗಮನದಲ್ಲಿಟ್ಟುಕೊಂಡು, ಈ ವಿಷಯದ ವ್ಯಾಪ್ತಿಯು ಗದಗ, ಸಿಂಧನೂರು, ಕನಕಗಿರಿ, ಗೌರಿಬಿದನೂರು,ಚಿತ್ರದುರ್ಗ, ಪಾವಗಡ, ಇಂದುಪುರ, ಅರಸೀಕೆರೆ, ಮುಂತಾದ ಪ್ರದೇಶಗಳನ್ನು ಟಗರು ಜೋಗಿಗಳನ್ನು ಸಂದರ್ಶಿಸುವ ಮೂಲಕ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳ ಅಂಶಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಮೂಲಕ ಅಧ್ಯಯನ ಕೈಗೊಳ್ಳಲಾಗುತ್ತದೆ.

**೧.೭. ಅಧ್ಯಯನದ ಉದ್ದೇಶಗಳು**

ಕುರುಬರ ಗುರು ಪರಂಪರೆಯ ಪ್ರಾಚೀನತೆ ಮತ್ತು ವೈಶಿಷ್ಟತೆಯನ್ನು ಅಧ್ಯಯನ ಮಾಡಬೇಕಾಗಿದೆ. ಹಾಗೇ ಕಲ್ಯಾಣಪಟ್ಟಣದಿಂದ ಹೊರ ತಲ್ಲಪಟ ಪ್ರಸಂಗಕ್ಕೆ ಸಂಬಂಧಿಸಿದಾಗಿದೆ. ಹಾಗೂ ಸತ್ತ ತಗರನ್ನು ಬದುಕಿಸಿ, ಪವಾಡ ಮರೆದ ಶಾಂತಮುತ್ತಯ್ಯನ ಪವಾಡ ಹಾಗೂ ನವ ಕೋಟಿಕುರಿಗಳ ಹುಟ್ಟಿಗೆ ಕಾರಣವಾದ ಪರಂಪರೆಯನ್ನು ಅಧ್ಯಯನ ಮಾಡಬೇಕಾಗಿದೆ.

೧. ಹಾಲುಮತದ ಪುರಾಣದ ಬಗ್ಗೆ ತಿಳಿಯುವುದು.
೨. ಟಗರುಜೋಗಿ ಸಮುದಾಯದ ಚಾರಿತ್ರ್ಯ ಹಿನ್ನಲೆಯನ್ನು ತಿಳಿಯುವುದು.
೩. ಟಗರು ಜೋಗಿ ಸಮುದಾಯದ ಕಲೆ ಮತ್ತು ಪ್ರದರ್ಶನದ ಬಗ್ಗೆ ತಿಳಿಯುವುದು.
೪. ಟಗರು ಜೋಗಿ ಸಮುದಾಯದ ಸಾಮಾಜಿಕ ಹಿನ್ನಲೆಯನ್ನು ತಿಳಿಯುವುದು.
೫. ಟಗರು ಜೋಗಿ ಸಮುದಾಯಿದ ಆರ್ಥಿಕ ಹಿನ್ನಲೆಯನ್ನು ತಿಳಿಯುವುದು.

**೧. ಹಾಲುಮತದ ಪುರಾಣದ ಬಗ್ಗೆ ತಿಳಿಯುವುದು.**

ಸುಮಾರು ಸಾವಿರಾರು ವರ್ಷಗಳ ಹಿನ್ನೆಲೆಯ ಇತಿಹಾಸವಿರುವ ನಮ್ಮ ಹಾಲುಮತ ಸಂಸ್ಕೃತಿ, ಮತ,ಧರ್ಮ,ಆಚರಣೆಗಳು, ಸಂಪ್ರದಾಯಗಳು ಹಾಗೂ ಪ್ರಚಲಿತ ಸತ್ಯ ಸಂಗತಿಗಳನ್ನು ಗುರುತಿಸಲಾಗಿದೆ ಶಂಬಾ ಜೋಶಿಯವರ ಹಾಲುಮತ ದರ್ಶನ, ಎಂ ಎಂ ಕಲಬುರ್ಗಿ, ಸಿ ಕೆ ಪರಮಶಿವಯ್ಯ ಮತ್ತು ಎಫ್ ಟಿ ಹಳ್ಳಿ ಕೇರಿಯವರ ತಗರ ಪವಾಡ, ಹಾಲುಮತ ಪುರಾಣ ಕೃತಿ ಹಾಗೂ ಚಂದ್ರಕಾಂತ ಬಿಜ್ಜರಗಿಯವರ ಸತ್ಯ ಸಂಶೋಧನೆಯ ಹಾಲುಮತ ಕೃತಿಗಳು, ಹಾಲುಮತ ಪುರಾಣದ ಬಗ್ಗೆ ಮಾಹಿತಿಯನ್ನು ಒದಗಿಸಿಕೊಡುತ್ತದೆ.ಇತಿಹಾಸ ನಿರ್ಮಿತವಾದ ಸತ್ಯ ಘಟನೆಗಳನ್ನು ನಾವು ಏನು ಮಾಡಿದರು ಅಳಿಸಿಹಾಕಲು ಸಾಧ್ಯವಿಲ್ಲ. ಅದು ಕೆಲವು ಜನಾಂಗದ ಮಾಹಿತಿಯನ್ನು ತಿಳಿಯಲು ಸಹಾಯಕವಾಗಿದೆ.

**೨. ತಗರು ಜೋಗಿಗಳ ಚಾರಿತ್ರಿಕ ಹಿನ್ನೆಲೆಯನ್ನು ತಿಳಿಯುವುದು.**

ಮೂಲತಃ ತಗರು ಜೋಗಿಗಳು ಅಲೆಮಾರಿ ವೃತ್ತಿ ಗಾಯಕರು ಅವರು ತಮ್ಮ ಕಲೆ ಪ್ರದರ್ಶನ ಮಾಡಿ ಭಿಕ್ಷೆ ಬೇಡುವರು ಹಾಗೇ ಅವರು ಹಾಲುಮತಸ್ಥರ ಮನೆ ಮನೆಗೆ ಹೋಗಿ ಹಾಲುಮತದ ಒಕ್ಕಲುಮನೆಗಳಿಗೆ ಹೋಗಿ ಪ್ರದರ್ಶನ ಮಾಡುವ ಕಾಯಕ ವೃತ್ತಿ ಮಾಡುತ್ತಿರುವ ತಗರು ಜೋಗಿಗಳ ಚಾರಿತ್ರಿಕ ಹಿನ್ನೆಲೆಯನ್ನು ತಿಳಿದುಕೊಳ್ಳಲಾಗಿದೆ ಇದು ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

**೩. ತಗರು ಜೋಗಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ಅಧ್ಯಯನ ಮಾಡುವುದು.**

ಮೂಲತಃ ತಗರು ಜೋಗಿಗಳ ಕಾಯಕ ಗಣನೀಯವಾದ ರೀತಿಯಲ್ಲಿ ಕಡಿಮೆ ಯಾಗುತ್ತಿದೆ. ಅವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಹಳ ಹಿಂದೆ ಉಳಿದಿದ್ದಾರೆ. ವಂಶ ಪಾರಂಪರ್ಯ ವೃತ್ತಿ ಹಾಗೂ ಧಾರ್ಮಿಕ ನಿಯಮಗಳು ಸಡಿಲಗೊಂಡಿರುವುದರಿಂದಾಗಿ ಪ್ರಸ್ತುತ ದಿನಗಳಲ್ಲಿ ತಗರು ಜೋಗಿಗಳ ಸಂಖ್ಯೆ ಕಡಿಮೆಯಾಗಿತ್ತಿದ್ದು ಅವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಹಳ ಹಿಂದೆ ಇದ್ದಾರೆ ಅಂಶ ಅಧ್ಯಯನದಿಂದ ತಿಳಿದು ಬಂದಿದೆ.

**೪. ತಗರು ಜೋಗಿಗಳ ಕಲೆ ಮತ್ತು ಪ್ರದರ್ಶನದ ಬಗ್ಗೆ ತಿಳಿಯುವುದು.**

ತಗರು ಜೋಗಿಗಳು ವಿಶೇಷವಾದ ಕಲಾ ಪ್ರದರ್ಶನವನ್ನು ಹೊಂದಿದ್ದಾರೆ. ತಗರು ಜೋಗಿ ಗಳ ಹತ್ತಿರ ಇರುವ ತಾಮ್ರ ಶಾಸನವು ಅವರ ಕಲೆ ಮತ್ತು ಪ್ರದರ್ಶನದ ಪುರಾಣವನ್ನು ತಿಳಿಸಿಕೊಡುತ್ತದೆ. ಅಲೆಮಾರಿ ವೃತ್ತಿಗಾಯಕರಾದ ತಗರು ಜೋಗಿಗಳು ಕಲೆಯಲ್ಲಿ ಕಡ್ಡಾಯವಾಗಿ ಕುರಿ ಭಿಕ್ಷೆ ಕೊಡುಬೇಕು ಎನ್ನವ ನಿಯಮವಿದೆ. ಕೇವಲ ಐದು ಕುರಿಗಳಿದ್ದರೆ ಸಾಕು ಅದರಲ್ಲಿ ಒಂದು ಕುರಿಯನ್ನು ಕೊಡಲೇಬೇಕೆಂದು ತಗರು ಜೋಗಿಗಳ ಹತ್ತಿರ ವಿರುವ ತಾಮ್ರ ಶಾಸನವು ಹೇಳುತ್ತದೆ. ಈ ನಿಯಮವನ್ನು ಕುರಿಗಾರರು ಸಹ ಒಪ್ಪಿಕೊಂಡು ಕಲಾ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಿತ್ತಿರುವುದು ಅಧ್ಯಯನದಿಂದ ತಿಳಿದು ಬಂದಿದೆ.

**೧.೮ ಅಧ್ಯಯನದ ಪ್ರಾಕಲ್ಪನೆಗಳು :**

೧. ಟಗರು ಜೋಗಿ ಸಮುದಾಯದ ಕೌಟುಂಬಿಕ ಸ್ಥಿತಿ ಮತ್ತು ಸಾಮಾಜಿಕ ಸ್ಥಿತಿ ಶೋಚನೀಯವಾಗಿದ್ದು ಕೆಳಸ್ಥರದಲ್ಲಿರುವುದು ಕಂಡು ಬರುತ್ತದೆ.
೨. ಟಗರು ಜೋಗಿ ಸಮುದಾಯದ ಸಾಂಸ್ಕೃತಿಕ ಆಚರಣೆ ವಿಭಿನ್ನವಾಗಿರುವುದು ಕಂಡುಬರುತ್ತದೆ.

**೧.೯ ಅಧ್ಯಯನದ ವಿಧಾನ ಮತ್ತು ತಂತ್ರಗಳು**

೧. ತಗರು ಜೋಗಿ ಪರಂಪರೆಯ ಅಧ್ಯಯನ ಎಂಬ ವಿಷಯದ ಅಧ್ಯಯನದಲ್ಲಿ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಣೆ ಮಾಡಲಾಗಿದ್ದು ಮಾಹಿತಿಯನ್ನು ಸಂಗ್ರಹಿಸಲು ಸಂದರ್ಶನ ಅನುಸೂಚಿಯನ್ನುರಚಿಸಿಕೊಂಡು ಅದನ್ನು

ಪೂರ್ವ ಪರೀಕ್ಷೆಗೆ ಒಳಪಡಿಸಿದ ನಂತರ ಬಂದ ತಿದ್ದುಪಡಿಗಳನ್ನು ಮಾಡಿದ ನಂತರ ಅಂತಿಮವಾಗಿ ರಚಿಸಿದ ಸಂದರ್ಶನ ಅನುಸೂಚಿಯನ್ನು ಸೂಚನಾದಾರರಿಗೆ ಅಳವಡಿಸಿ ಪ್ರಾಥಮಿಕಮಾಹಿತಿಯನ್ನು ಸಂಗ್ರಹಿಸಲಾಗಿದೆ.

೨. ಪ್ರಾಥಮಿಕ ಆಕರಗಳು: ಸಹಭಾಗಿ ಅವಲೋಕನವನ್ನು ಮಾಹಿತಿ ಸಂಗ್ರಹಣೆಗೆ ಬಳಸಿಕೊಳ್ಳಲಾಗಿದೆ.ಇವುಗಳ ಜೊತೆಗೆ ಆಧುನಿಕ ಸಲಕರಣೆಗಳಾದ ಕ್ಯಾಮರಾ, ಮೋಬೆಲ್ ಗಳನ್ನು ಸಹ ಬಳಸಿಕೊಳ್ಳಲಾಗಿದೆ.

೩. ಅನುಷಂಗಿಕ ಆಕರಗಳು: ಅನುಷಂಗಿಕ ಮಾಹಿತಿ ಮೂಲಗಳಾದ ದಾಖಲೆಗಳು ಅಂದರೆ, ಹಾಲುಮತ ಪುರಾಣಗಳು. ಹಾಲುಮತ ದರ್ಶನ, ಕರ್ನಾಟಕ ನಾಥ ಪಂಥ ಪುಸ್ತಕ ಮತ್ತು ವಿಷಯ ಪರಿಣಿತರೊಂದಿಗೆ ಚರ್ಚಿಸಿ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೪. ಮಾಹಿತಿ ವಿಶ್ಲೇಷಣೆ: ಸಂಶೋಧನಾ ವಿಧಾನದ ಎಲ್ಲಾ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಸಂಖ್ಯಾಶಾಸ್ತ್ರೀಯ ಚೌಕಟ್ಟಿನಲ್ಲಿ ವಿಶಲೇಷಿಸುವ ಮೂಲಕ ಸಮಾಜಶಾಸ್ತ್ರೀಯ ವಿಶ್ಲೇಷಣೆ ಮಾಡಿ ವರದಿಯನ್ನು ತಯಾರಿಸಲಾಗಿದೆ.

**೧.೧೦ ಅಧ್ಯಾಯಗಳ ವರ್ಗೀಕರಣ**

ಮಾನವನ ತನ್ನ ಐತಿಹಾಸಿಕವಾದ ಮಹಾನ ನಡಿಗೆಯಲ್ಲಿ ದಾಪುಗಾಲಿರಿಸುತ್ತಾ ಬಂದಿದೆ. ಅಂದ ಮಾತ್ರಕ್ಕೆ ಇಡೀ ಜಗತ್ತಿನ ಎಲ್ಲಾ ಕಡೆ ಮಾನವ ಸಮೂಹ ಸಮುದಾಯಗಳು ನಾಗರಿಕತೆಯ ಘಟ್ಟವನ್ನು ತಲುಪಿದೆ ಎನ್ನುವಂತಿಲ್ಲ, ನಾಗರಿಕತೆಯಿಂದ ಬಹು ದೂರವಿರುವ ಹಾಗೂ ಅಕ್ಷರ ಪೂರ್ವ ಸ್ಥಿತಿಯಲ್ಲಿರುವ ಸಮೂಹಗಳ ಸಂಖ್ಯೆ ಕಡಿಮೆಯಿಲ್ಲ, ಅವುಗಳೆಂದರೆ ಮೂಲನಿವಾಸಿಗಳು, ಆದಿವಾಸಿಗಳು, ಬುಡಕಟ್ಟು ಜನಾಂಗಗಳನ್ನು ನೋಡಬಹುದಾಗಿದೆ.ಜನಸಂಖ್ಯೆಯ ದೃಷ್ಟಿಯಿಂದ ಬಹಳ ಕಡಿಮೆ ಇರುವ ಜನ ಸಮುದಾಯದ ಜೀವನ ತುಂಬಾ ಭಿನ್ನರೀತಿಯಲ್ಲಿರುತ್ತದೆ ಹಾಗೂ ವಿಶಿಷ್ಟವಾಗಿರುತ್ತದೆ.ಈ ಸಮುದಾಯಗಳ ಜೀವನ ಕ್ರಮವನ್ನು ಸಮಾಜಶಾಸ್ತ್ರೀಯ ಅಥವಾ ಮಾನವ ಶಾಸ್ತ್ರೀಯ ಹಿನ್ನೆಲೆಯಲ್ಲಿ ಅಧ್ಯಯನಮಾಡುವುದೆಂದರೆ ಕುತೂಹಲದ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ತಗರು ಜೋಗಿ ಪರಂಪರೆಯ ಅಧ್ಯಯನವು ಸಹ ಒಂದಾಗಿದೆ.

ಪ್ರಸ್ತುತವಾಗಿ ಸಂಶೋಧನೆಯಲ್ಲಿ ಮಹಾಪ್ರಬಂಧವು ೫ ಅಧ್ಯಾಯಗಳನ್ನು ಒಳಗೊಂಡಿದ್ದು, ಅದರಲ್ಲಿ ಅಧ್ಯಯನದ ಉದ್ದೇಶ,ವ್ಯಾಪ್ತಿ, ವಿಧಾನ ಮತ್ತು ಮಹತ್ವ ಎಂಬುದು ಮೊದಲನೆಯ ಅಧ್ಯಯನವಾಗಿದ್ದು ಇದರಲ್ಲಿ ಸಂಶೋಧನೆಗಿರುವ ಉದ್ದೇಶಗಳನ್ನು, ವ್ಯಾಪಿಯನ್ನು ಸಂಶೋಧನಾ ಬರವಣಿಗೆಯಲ್ಲಿ ಅನುಸರಿಸುವ ವಿಧಾನಗಳನ್ನು ಸದ್ಯದ ಅಧ್ಯಯನ ಹೇಗೆ ಮಹತ್ವದಾಗಿದೆ ಎಂಬ ಅಂಶಗಳ ಬಗ್ಗೆವಿವರಿಸಲಾಗಿದೆ. ಹಾಗೇ ಪ್ರಸ್ತುತ ಸಮುದಾಯಗಳ ಕುರಿತು ಚರ್ಚೆಗಳನ್ನು ಮಾಡಲಾಗಿದೆ. ಮತ್ತು ಸಮೀಕ್ಷೆಯ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ತಗರು ಜೋಗಿ ಪರಿಚಯ ಮತ್ತು ಪರಂಪರೆಯ ಬಗ್ಗೆತಿಳಿಸಲಾಗಿದೆ ತಗರು ಜೋಗಿಗಳುಎಂದರೆ ಯಾರು ಮತ್ತು ಇತರ ಸಮುದಾಯದೊಂದಿಗೆ ತಗರು ಜೋಗಿಗಳ ಸಂಬಂಧ,ಹಾಗೂ ಭೌಗೋಳಿಕ, ಹಿನ್ನೆಲೆ, ಪುರಾಣಗಳಲ್ಲಿ ತಗರು ಜೋಗಿಗಳ ಪರಿಚಯದ ಬಗ್ಗೆ ವಿವರಿಸಲಾಗಿದೆ. ಈ ಮೂಲಕ ತಗರು ಜೋಗಿಗಳನ್ನು ಪ್ರಸ್ತುತ ಸಮಾಜಕ್ಕೆ ಕರೆತರಲಾಗಿದೆ.

ಮೂರನೇ ಅಧ್ಯಾಯದಲ್ಲಿ ತಗರು ಜೋಗಿಗಳ ಆಚರಣೆ ಮತ್ತು ನಂಬಿಕೆಗಳ ಬಗ್ಗೆ ತಿಳಿಸಲಾಗಿದೆ.ತಗರು ಜೋಗಿಗಳ ಕಾಯಕವು ಭಿನ್ನ ಹಾಗೂವಿಶಿಷ್ಟವಾಗಿದೆ.ಪರಂಪಾರ್ಯ ವೃತ್ತಿ, ಹಬ್ಬಗಳು. ದೈವಾರಾಧನೆ, ವಿವಾಹ ಕ್ರಮ, ಮತ್ತು ಶವಸಂಸ್ಕಾ ಬಗ್ಗೆ ಮಾಹಿತಿ ತಿಳಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ತಗರು ಜೋಗಿಗಳು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳ ಬಗ್ಗೆ ತಿಳಿಸಲಾಗಿದೆ. ಅಧ್ಯಯನದ ಮುಖ್ಯ ಭಾಗವೆಂದರೆ ಪ್ರಸ್ತುತ ತಗರು ಜೋಗಿಗಳ ಸ್ಥಿತಿಗತಿಗಳನ್ನು ತಿಳಿಯುವಲ್ಲಿ ಸಹಾಯಕವಾಗಿದೆ. ಕೌಟುಂಬಿಕ ಸ್ಥಿತಿಗಳು, ಹಾಗೂ ಸಾಮಾಜಿಕ ಬದಲಾವಣೆಯ ಸ್ವರೂಪಗಳ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಸಮೀಕ್ಷೆಯಿಂದ ಪಡೆಯಲಾಗಿದೆ.

ಐದನೇ ಅಧ್ಯಾಯದಲ್ಲಿ ಉಪಸಂಹಾರ ಮತ್ತು ಸಲಹೆಗಳನ್ನು ನೀಡಲಾಗಿದೆ. ಸಂಶೋಧನೆಯಿಂದ ವ್ಯಕ್ತವಾದ ಅಂಶಗಳನ್ನು ತಿಳಿಸಲಾಗಿದೆ ಅವಸಾನದ ಹಂಚಿನಲ್ಲಿರುವ ತಗರುಜೋಗಿಗಳ ಪರಿವರ್ತಿತ ಕಾಯಕದ ಬಗ್ಗೆ ಹಾಗೂ ಪರಿವರ್ತನೆಯ ಬಗ್ಗೆ ತಿಳಿಸಲಾಗಿದೆ.

**ಕೊನೆ ಟಿಪ್ಪಣಿ**

೧. ಗುರುಲಿಂಗಯ್ಯ ಎಂ, ಅಂಚಿನ ಗುಂಪುಗಳ ಸಮಾಜ ಶಾಸ್ತ್ರ, ಪುಟಸಂಖ್ಯೆ–೪೩.
೨. ಮೇತ್ರಿ.ಕೆ.ಎಂ, ಬುಡಕಟ್ಟು ನ್ಯಾಯ ವ್ಯವಸ್ಥೆ, ಪುಟಸಂಖ್ಯೆ ೨೦೪.
೩. ಶಂಕರರಾವ್.ಸಿ.ಎನ್. ಸಮಾಜಶಾಸ್ತ್ರ ದರ್ಶನ ಭಾಗ–೨, ಪುಟಸಂಖ್ಯೆ –೮೧೧
೪. ಮೇತ್ರಿ.ಕೆ.ಎಂ,. ಹಾಲುಮತ ಬುಡಕಟ್ಟು, ಪುಟ ಸಂಖ್ಯೆ ೯೮.
೫. ಸೊಬಟಿ ಚಂದ್ರಪ್ಪ, ಹಾಲುಮತ ಸಾಂಸ್ಕೃತಿಕ ಕಥನ, ಪುಟಸಂಖ್ಯೆ ೬ ಮತ್ತು ೭.

**ಆಧಾರ ಗ್ರಂಥಗಳು**

೧. ಗುರು ಲಿಂಗಯ್ಯ.ಎಂ, ಅಂಚಿನ ಗುಂಪುಗಳ ಸಮಾಜಶಾಸ್ತ್ರ, ದೀವಿತ್ ಪ್ರಕಾಶನ, ತುಮಕೂರು, ೨೦೧೬.
೨. ಪ್ರಭಾಕರ್.ಎ.ಎಸ್. ಆದಿವಾಸಿ ಆಖ್ಯಾನ, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ,೨೦೦೮.
೩. ಶಂಕರ್‌ರಾವ್.ಸಿ.ಎನ್ ಸಮಾಜಶಾಸ್ತ್ರ ದರ್ಶನ–೦೨, ಜೈ ಭಾರತ್ ಪ್ರಕಾಶನ, ಮಂಗಳೂರು,೨೦೧೪.
೪. ಮೇತ್ರಿ..ಕೆ.ಎಂ. ಹಾಲುಮತ ಬುಡಕಟ್ಟು, ಶ್ರೀ ಸಿದ್ಧರಾಮನಾಥ ಸ್ವಾಮೀಜಿ, ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಕಲಬುರ್ಗಿ ವಿಭಾಗ, ೨೦೦೭
೫. ಸೊಬಟಿ ಚಂದ್ರಪ್ಪ, ಹಾಲುಮತ ಸಾಂಸ್ಕೃತಿಕ ಕಥನ, ವಿದ್ಯಾನಿಧಿ ಪ್ರಕಾಶನ, ಗದಗ–೨೦೧೨